**ಕರ್ನಾಟಕ ಸರ್ಕಾರ**

## ಗ್ರಾಮೀಣಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಸ : ಕಾ.ಇ / ಗ್ರಾ.ನೀ.ಸ. & ನೈ.ವಿ.ಚಿ / / 2022-23 228 . ದಿನಾಂಕ: 10.6.2022

-: ಅಧಿಸೂಚನೆ :-

**ವಿಷಯ:–** ಜಲಜೀವನ್ ಮಿಷನ್‌ಯೋಜನೆಯಡಿ ಗ್ರಾಮೀಣ ಕುಡಿಯುವ ನೀರು& ನೈರ್ಮಲ್ಯ ವಿಭಾಗ ಹಾಗೂ ಉಪವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು, ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆನ್ಲೈನ್‌ಮೂಲಕ ಅರ್ಜಿ ಆಹ್ವಾನಿಸುವ ಕುರಿತು

ಉಲ್ಲೇಖ: 1) ಮಾನ್ಯಆಯುಕ್ತರು, ಗ್ರಾಕುನೀ&ನೈ ಇಲಾಖೆ ಬೆಂಗಳೂರು ರವರ ಪತ್ರ ಸಂ. RDP/RDW&SD/C-3/2019 / 27.5.2021

2) ಮಾನ್ಯಆಯುಕ್ತರು, ಗ್ರಾಕುನೀ&ನೈ ಇಲಾಖೆ ಬೆಂಗಳೂರು ರವರ ಪತ್ರ ಸಂ. RDP/RDW&SD/C- 3/2018-2019 / 8.12.2021

3) ನಿರ್ದೇಶಕರು, ಗ್ರಾಕುನೀ&ನೈ ಇಲಾಖೆ ಬೆಂಗಳೂರು ರವರ ಪತ್ರ ಸಂ :ಗ್ರಾಕುನೀ&ನೈಇ/ ಮುಇಂ/ಆ-3 /08/581/2018-19 /13.5.2022

4) ಸರ್ಕಾರದಸುತ್ತೋಲೆ ಪತ್ರಸಂಖ್ಯೆ:ಸಿಆಸುಇ137ಎಂಇಎಸ್ 2022, ದಿ:19.05.2022

ಜಲಜೀವನ್ ಮಿಷನ್‌ಯೋಜನೆ ಯಡಿಗ್ರಾಮೀಣ ಕುಡಿಯುವ ನೀರು& ನೈರ್ಮಲ್ಯ ವಿಭಾಗ ಹಾಗೂ ಉಪವಿಭಾಗಗಳಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು, ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆನ್ಲೈನ್‌ಮೂಲಕ ಅರ್ಜಿಗಳನ್ನುಆಹ್ವಾನಿಸಿದೆ.

| ಕ್ರಸಂ | ಹುದ್ದೆ | ಒಟ್ಟು ಹುದ್ದೆ | ವಿದ್ಯಾರ್ಹತೆ | ವಯಸ್ಸು | ಅನುಭವ | ಮಾಸಿಕ ಸಂಭಾವನೆ | ಷರಾ |
|---|---|---|---|---|---|---|---|
| 1 | ಕಿರಿಯ ಸಮಾಲೋಚಕರು ( ಸಹಾಯಕ ಇಂಜಿನಿಯರ್) | 12 | Minimum First class Civil Engineering from a AICTE recognized university. Distance /Diploma holders should not be considered | 30 ವರ್ಷ ಮೀರದಂತಹ | ಕನಿಷ್ಠ 2 ವರ್ಷದಅನುಭವ ಹೊಂದಿರಬೇಕು | ರೂ 40000.00 | ಸಾರ್ವಜನಿಕರೊಂದಿಗೆ ಕನ್ನಡ ಭಾಷೆಯಲ್ಲಿ ವ್ಯವಹರಿಸಲು ಪೂರಕಜ್ಞಾನ ಹೊಂದಿರಬೇಕು |
| 2 | ಕಿರಿಯ ಸಮಾಲೋಚಕರು ( ಕಿರಿಯ ಇಂಜಿನಿಯರ್) | 6 | Minimum First class Diploma holder in Civil Engineering from a AICTE recognized university. Distance /Diploma holders should not be considered | 28 ವರ್ಷ ಮೀರದಂತಹ | ಕನಿಷ್ಠ 2 ವರ್ಷದಅನುಭವ ಹೊಂದಿರಬೇಕು | ರೂ 30000.00 | |

### ಸೂಚನೆಗಳು

1. ಅರ್ಜಿಸಲ್ಲಿಸಲು ಪ್ರಾರಂಭದ ದಿನಾಂಕ: 13.6.2022 ಮತ್ತು ಕೊನೆಯ ದಿನಾಂಕ: 24.6.2022
2. ಸರ್ಕಾರಿ ಕೆಲಸದ ಅವಧಿಯಲ್ಲಿ ಮಾತ್ರ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 05:30 ಗಂಟೆಯವರೆಗೆ. (ಸರ್ಕಾರಿ ರಜೆಯ ದಿನ ಆನ್ಲೈನ್ ಅರ್ಜಿಗಳು ಸ್ವೀಕೃತಿಯಾಗುವುದಿಲ್ಲ.)
3. ಅರ್ಜಿಗಳನ್ನು: https://chikkamagaluru.nic.in ವೆಬ್ಸೈಟ್‌ನ ಮುಖಾಂತರ ಅರ್ಜಿ ಸಲ್ಲಿಸುವುದು.

### ಆಯ್ಕೆ ವಿಧಾನ ಹಾಗೂ ಷರತ್ತುಗಳು.

1. ಆಯ್ಕೆಯಾದ ಅಭ್ಯರ್ಥಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.
2. ನಿಗದಿಪಡಿಸಿದ ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆ ಹೊಂದಿರಬೇಕು.

3. ನೇಮಕಾತಿ ಅವಧಿಯು 11 ತಿಂಗಳಾಗಿದ್ದು, ಇವರ ಕಾರ್ಯಕ್ಷಮತೆ ಪರಿಶೀಲಿಸಿ ಮುಂದುವರೆಸುವ ಬಗ್ಗೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯಿತಿ, ಚಿಕ್ಕಮಗಳೂರು ರವರು ತೀರ್ಮಾನ ಕೈಗೊಳ್ಳುವರು.

4. ದಾಖಲಾತಿ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲು ನಿಗಧಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವವನ್ನು ಪರಿಗಣಿಸಿ ಈ ಕೆಳಕಂಡ ಮಾನದಂಡಗಳಲ್ಲಿ ಮೆರಿಟ್ಪಟ್ಟಿ ತಯಾರಿಸುವುದು.

5. ಒಟ್ಟುಅಂಕಗಳು 125

--ಕನಿಷ್ಠ ವಿದ್ಯಾರ್ಹತೆಯಾದ ಪದವಿಯಲ್ಲಿ ಪಡೆದ ಶೇಕಡ ಅಂಕಗಳನ್ನೇ (ಉದಾಹರಣೆಗೆ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ, ಆಪೂರ್ಣ ಅಂಕಗಳನ್ನು ಪರಿಗಣಿಸುವುದು.70 ಅಂಕವನ್ನಾಗಿ ಪರಿಗಣಿಸುವುದು) ಒಟ್ಟು ಅಂಕವಾಗಿ ಪರಿಗಣಿಸಲಾಗುವುದು.

-- ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ ಪಡೆದ ಅನುಭವವನ್ನೇ ಪ್ರತಿ ವರ್ಷಕ್ಕೆ (Experience)- 4ಅಂಕಗಳು (ಉದಾಹರಣೆಗೆ 3 ವರ್ಷಗಳ ಅನುಭವ ಹೊಂದಿದ್ದಲ್ಲಿ 3*4=12ಅಂಕಗಳನ್ನುನೀಡುವುದು)ಗರಿಷ್ಠ5 ವರ್ಷದ ಅನುಭವವನ್ನೇ ಮಾತ್ರ ಪರಿಗಣಿಸಲಾಗುವುದು. ಇದಕ್ಕೆ ಅನುಭವ ದೃಢೀಕರಣ ಪತ್ರ ಮತ್ತು ವೇತನ ಪಡೆದ ಬ್ಯಾಂಕ್ ಸ್ಟೇಟ್‌ಮೆಂಟ್ ಕಡ್ಡಾಯವಾಗಿ ಸಲ್ಲಿಸುವುದು.

-- ಅರ್ಹ ಅಭ್ಯರ್ಥಿಗಳು ಕನ್ನಡ ಪರೀಕ್ಷೆಗೆ ಹಾಜರಾಗುವುದು ಮತ್ತುಇದಕ್ಕೆ 5 ಅಂಕಗಳನ್ನುನಿಗಧಪಡಿಸಿದೆ.

6.ಕಿರಿಯ ಸಮಾಲೋಚಕರು (ಸಹಾಯಕ ಇಂಜಿನಿಯರ್) ಹುದ್ದೆಗೆವಿದ್ಯಾರ್ಹತೆಯಾಗಿ ಪದವಿ ವಿದ್ಯಾರ್ಹತೆಯನ್ನು ಮಾತ್ರ ಪರಿಗಣಿಸಲಾಗುವುದು.

7.ಕಿರಿಯ ಸಮಾಲೋಚಕರು (ಕಿರಿಯಇಂಜಿನಿಯರ್) ಹುದ್ದೆಗೆ ಡಿಪ್ಲೋಮಾ ವಿದ್ಯಾರ್ಹತೆಯನ್ನು ಮಾತ್ರ ಪರಿಗಣಿಸಲಾಗುವುದು. ಬಿ.ಇ. ಪದವಿಯನ್ನು ಪರಿಗಣಿಸಲಾಗುವುದಿಲ್ಲ.

8.ಒಂದು ವೇಳೆಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸುವುದು ಮತ್ತುಮೆರಿಟ್ ಆಧಾರದಲ್ಲಿ ನಂತರದ ಜ್ಯೇಷ್ಠತೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

9.ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ:ಸಿಆಸುಇ137ಎಂಇಎಸ್ 2022, ದಿ:19.05.2022ರ ಸುತ್ತೋಲೆಯಂತೆ ಶೇ.33 ಹುದ್ದೆಗಳನ್ನು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿರಿಸಿದೆ.

10.ಅರ್ಜಿ ಆಹ್ವಾನಿಸಿದ ಹುದ್ದೆಗಳಿಗೆ ಈ ಮೇಲಿನ ಕೋಷ್ಟಕದಲ್ಲಿ ವಿವರಿಸಿರುವ ಕನಿಷ್ಠ ವಿದ್ಯಾರ್ಹತೆ, ಅನುಭವ ಮತ್ತು ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರಬೇಕು.

11.ಕರ್ನಾಟಕ ಸರ್ಕಾರದ ನಿಯಮಗಳನ್ವಯ, ಪಾರದರ್ಶಕ ಆಯ್ಕೆ ವಿಧಾನ ಅಳವಡಿಸಲಾಗಿದ್ದು, ಯಾವುದೇ ಅಭ್ಯರ್ಥಿಯು ಈ ಮೇಲೆ ವಿವರಿಸಿರುವ ಷರತ್ತುಗಳನ್ನು ಹಾಗೂ ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ ಸದರಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಈ ಮೇಲ್ಕಂಡ ಎಲ್ಲಾ ದಾಖಲಾತಿ ಪರಿಶೀಲನೆ ಹಾಗು ಮೇರಿಟ್ಪಟ್ಟಿಯನ್ನು ಸಿದ್ದಪಡಿಸಿರುವ ಪ್ರಕ್ರಿಯೆಯನ್ನು ಹೊರಗುತ್ತಿಗೆ ಮಾನವ ಸಂಪನ್ಮೂಲ ಸಂಸ್ಥೆಯು ನಿರ್ವಹಿಸುವುದು.

ಹೆಚ್ಚಿನ ಮಾಹಿತಿಗಾಗಿ: ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ವಿಭಾಗ, ಚಿಕ್ಕಮಗಳೂರು ಇವರನ್ನು ಸಂಪರ್ಕಿಸುವುದು. ದೂಸಂಖ್ಯೆ: 08262-295795, ಇಮೇಲ್- eerwsckm@gmail.com

ಕಾರ್ಯಪಾಲಕ ಇಂಜಿನಿಯರ್,<br>
ಗ್ರಾಮೀಣಕುಡಿಯುವ ನೀರು& ನೈರ್ಮಲ್ಯ ವಿಭಾಗ,<br>
ಚಿಕ್ಕಮಗಳೂರು.

ಪ್ರತಿಯನ್ನು :

1. ನಿರ್ದೇಶಕರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಅಧೀಕ್ಷಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವೃತ್ತ, ಕುವೆಂಪುನಗರ ಮೈಸೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯಿತಿ, ಚಿಕ್ಕಮಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ಉ.ವಿಭಾಗ, ಚಿಕ್ಕಮಗಳೂರು, ಕಡೂರು, ಕೊಪ್ಪ, ಮೂಡಿಗೆರೆ, ಎನ್.ಆರ್.ಪುರ, ಶೃಂಗೇರಿ ತರೀಕೆರೆ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಎನ್.ಐ.ಸಿ, ಜಿಲ್ಲಾಪಂಚಾಯಿತಿ, ಚಿಕ್ಕಮಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ

ಕಾರ್ಯಪಾಲಕ ಇಂಜಿನಿಯರ್,
ಗ್ರಾಮೀಣಕುಡಿಯುವ ನೀರು& ನೈರ್ಮಲ್ಯ ವಿಭಾಗ,
ಚಿಕ್ಕಮಗಳೂರು.